# ರಜನಿಯ 'ಪಾಲಿಟಿಕ್ಸ್'



ರಜನಿಕಾಂತ್ ನಿಜಕ್ಕೂ 'ಬುದ್ಧಿವಂತ ರಾಜಕಾರಣಿ' ಎನ್ನುವುದು ದೃಢಪಟ್ಟಿದೆ. 1996ರಿಂದಲೂ ತನಗೆ ರಾಜಕೀಯದಲ್ಲಿ ಆಸಕ್ತಿ ಇದೆ ಎನ್ನುವುದನ್ನು ಒಂದಲ್ಲ ಒಂದು ರೀತಿಯಲ್ಲಿ ಪ್ರಕಟಿಸುತ್ತಲೇ ಬಂದ ರಜನಿಕಾಂತ್, ಈಗ ತಮಿಳುನಾಡಿನ ಎಲ್ಲ ರಾಜಕೀಯ ವೀಕ್ಷಕರ ಲೆಕ್ಕಾಚಾರಗಳನ್ನು ಬುಡಮೇಲುಗೊಳಿಸಿದ್ದಾರೆ. 'ನನಗೆ ಮುಖ್ಯಮಂತ್ರಿಯಾಗುವ ಬಯಕೆ ಇಲ್ಲ. ಆದರೆ ತಮಿಳುನಾಡಿನ ರಾಜಕೀಯದಲ್ಲಿ ಸುನಾಮಿ ಮಾದರಿಯ ಬದಲಾವಣೆ ಆಗುತ್ತದೆ' ಎಂದು ಕಳೆದ ವಾರ ಬಹಿರಂಗ ಹೇಳಿಕೆ ನೀಡಿದ್ದಾರೆ. ಅಂದರೆ ರಜನಿಕಾಂತ್ ನೇರ ರಾಜಕೀಯಕ್ಕೆ ಇಳಿಯುವುದಿಲ್ಲ, ಯಾವುದೇ ರಾಜಕೀಯ ಪಕ್ಷ ಕಟ್ಟುವುದಿಲ್ಲ ಎನ್ನುವುದು ಸ್ಪಷ್ಟವಾಯಿತು. ಹಾಗಿದ್ದರೆ ಇದುವರೆಗೆ ಅವರೊಂದು ಹೊಸ ರಾಜಕೀಯ ಪಕ್ಷ ಕಟ್ಟಲಿದ್ದಾರೆ ಎನ್ನುವ ಗಾಳಿಸುದ್ದಿಗಳನ್ನು ಕಾಲಕಾಲಕ್ಕೆ ಹರಿಬಿಟ್ಟದ್ದೇಕೆ.. ಎನ್ನುವ ಪ್ರಶ್ನೆಗೆ ಉತ್ತರ ಇಷ್ಟೇ– ಅವರ ಸಿನಿಮಾಗಳು ಈ ಸುದ್ದಿಯ ಬೆನ್ನೇರಿ ಬಾಕ್ಸಾಫೀಸ್‌ನಲ್ಲಿ ಯಶಸ್ವಿಯಾಗಲಿ ಎನ್ನುವುದು! ರಾಜಕೀಯ ಮತ್ತು ಸಿನಿಮಾ ಸದಾ ಒಂದರ ಹೆಗಲ ಮೇಲೆ ಇನ್ನೊಂದು ಸವಾರಿ ಮಾಡುವ ತಮಿಳುನಾಡಿನಲ್ಲಿ ಸಿನಿಮಾರಂಗದ ಯಶಸ್ಸಿಗಾಗಿ ರಜನಿ ನಡೆಸಿದ 'ಪಾಲಿಟಿಕ್ಸ್' ಫಲ ನೀಡಿದೆ ಎನ್ನಬಹುದು.

ತಮಿಳುನಾಡಿನ ವಿಧಾನಸಭೆ ಚುನಾವಣೆ ಮುಂದಿನ ವರ್ಷ ನಡೆಯಬೇಕು. ಒಂದು ವರ್ಷ ಮುಂಚೆಯೇ ರಜನಿ ಶಸ್ತ್ರತ್ಯಾಗ ಮಾಡಿದಂತಾಗಿದೆ. ತಮಿಳುನಾಡಿನ ಪ್ರಮುಖ ಪಕ್ಷಗಳಾದ ಅಣ್ಣಾಡಿಎಂಕೆ ಮತ್ತು ಡಿಎಂಕೆ ಎರಡೂ ಈ ನಿರ್ಧಾರದಿಂದ ದೊಡ್ಡದೊಂದು ನಿಟ್ಟುಸಿರು ಬಿಡುವಂತಾಗಿದೆ. ಇದೇ ವೇಳೆ ರಜನಿಯ ರಾಜಕೀಯ ಗಿಮಿಕ್ ಬಗ್ಗೆ ತಮಿಳುನಾಡಿನ ಮತದಾರರೇ ಜೋಕ್ ಮಾಡಿಕೊಂಡು ನಗುವಂತಾಗಿದೆ.

ರಾಜಕೀಯದ ಕುರಿತು ರಜನಿ ನೀಡಿರುವ ಈಗಿನ ಹೇಳಿಕೆಯೂ ಅವರ ಸಿನಿಮಾ ಡೈಲಾಗ್‌ನಂತೆಯೇ ಇದೆ. 'ನಾನು ಮುಖ್ಯಮಂತ್ರಿ ಆಗುವುದಿಲ್ಲ' ಎನ್ನುವ ಹೇಳಿಕೆಯನ್ನು ರಾಜಕಾರಣಿಗಳೇ ಆಡಿಕೊಂಡು ನಗುತ್ತಿದ್ದಾರೆ. ಯಾರೇ ಆದರೂ ಮುಖ್ಯಮಂತ್ರಿ ಆಗಬೇಕಿದ್ದರೆ ಮೊದಲು ರಾಜಕೀಯ ಪಕ್ಷ ಕಟ್ಟಬೇಕು. ಬಳಿಕ ಚುನಾವಣೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಶಾಸಕರು ಆ ಪಕ್ಷದಿಂದ ಗೆಲ್ಲಬೇಕು. ಆ ಬಳಿಕ ಆ ಶಾಸಕರು ಆತನನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಬೇಕು. ಇದರಲ್ಲಿ ಮೊದಲ ಹೆಜ್ಜೆಯನ್ನೇ ಇಡದ ರಜನಿ ಮುಖ್ಯಮಂತ್ರಿ ಆಗುವ ಪ್ರಶ್ನೆಯಾದರೂ ಎಲ್ಲಿದೆ? ಈಗ ಅಧಿಕಾರದಲ್ಲಿ ಇರುವ ಪಕ್ಷ ಏನಾದರೂ ರಜನಿಯನ್ನು 'ಬನ್ನಿ, ಮುಖ್ಯಮಂತ್ರಿಯಾಗಿ' ಎಂದು ಕರೆದಿದೆಯೆ ಎಂದರೆ ಅದೂ ಇಲ್ಲ. 'ಸುಮ್ಮನೇ ಗಾಳಿಯಲ್ಲಿ ಸಿನಿಮಾ ಡೈಲಾಗ್ ಹೊಡೆದು ಇಷ್ಟು ವರ್ಷಗಳ ಕಾಲ ತಮ್ಮ ಸಿನಿಮಾಗಳಿಗೆ ಮಾರ್ಕೆಟ್ ಸೃಷ್ಟಿಸಿದ್ದಷ್ಟೇ' ಎನ್ನುವುದೀಗ ತಮಿಳಿನ ಪುಡಿ ರಾಜಕಾರಣಿಗಳಿಗೂ ಅರ್ಥವಾಗಿದೆ.

ಹಾಗೆ ನೋಡಿದರೆ ರಜನಿಕಾಂತ್ ಬೆಂಬಲದಿಂದ ಬೇರೆ ಯಾವುದೇ ಪಕ್ಷ ಅಧಿಕಾರಕ್ಕೆ ಬಂತು ಎನ್ನುವಂತೆಯೂ ಇಲ್ಲ. 1996ರಿಂದಲೇ ರಜನಿ ವಿವಿಧ ಪಕ್ಷಗಳನ್ನು ಬೆಂಬಲಿಸಿ ಹೇಳಿಕೆ ನೀಡುತ್ತಾ ಬಂದರು. ಆದರೆ ಬಹುತೇಕ ಸಂದರ್ಭಗಳಲ್ಲಿ ಆ ಹೇಳಿಕೆಯಿಂದ ಆ ಪಕ್ಷಗಳಿಗೆ ದೊಡ್ಡ ಲಾಭವೇನೂ ಆಗಲಿಲ್ಲ. 2004ರ ಲೋಕಸಭಾ ಚುನಾವಣೆಯ ವೇಳೆ 'ಪಟ್ಟಾಳಿ ಮಕ್ಕಳ್ ಕಟ್ಚಿ' ಪಕ್ಷದ ವಿರುದ್ಧ ರಜನಿ ಬಹಿರಂಗ ಸಿಟ್ಟು ವ್ಯಕ್ತಪಡಿಸಿದರೂ ಆ ಪಕ್ಷ ಚುನಾವಣೆಯಲ್ಲಿ ಉತ್ತಮ ಸಾಧನೆ ಮಾಡಿತು. ಜಯಲಲಿತಾ ಅವರ ನೇತೃತ್ವದ ಅಣ್ಣಾಡಿಎಂಕೆ ಪಕ್ಷದ ವಿರುದ್ಧ ರಜನಿ ಗುಟುರು ಹಾಕಿದಾಗಲೂ, ಆ ಕಾರಣದಿಂದ ಚುನಾವಣಾ ಫಲಿತಾಂಶದಲ್ಲಿ ಹೆಚ್ಚಿನ ವ್ಯತ್ಯಾಸ ಆಗಲಿಲ್ಲ. ನಡುವೆ ಕೇಂದ್ರದಲ್ಲಿ ಅಧಿಕಾರ ಪಡೆದ ಬಿಜೆಪಿ ಪರವಾಗಿ ಬಹಿರಂಗ ಹೇಳಿಕೆ ನೀಡಿದರು. ಅದರಿಂದ ಬಿಜೆಪಿಗೂ ಯಾವ ರಾಜಕೀಯ ಲಾಭ ಆಗಲಿಲ್ಲ. 2017ರ ಡಿಸೆಂಬರ್ 31ರಂದು ರಜನಿಕಾಂತ್ ಸ್ಪಷ್ಟವಾಗಿ 'ನಾನೊಂದು ರಾಜಕೀಯ ಪಕ್ಷ ಕಟ್ಟುತ್ತೇನೆ. ರಾಜ್ಯದ ಎಲ್ಲ 234 ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತೇನೆ' ಎಂದು ಘೋಷಣೆ ಮಾಡಿದ್ದರು. ಆದರೆ ಎರಡೂಕಾಲು ವರ್ಷಗಳಲ್ಲಿ ಅಭಿಮಾನಿಗಳ ಐದಾರು ಮೀಟಿಂಗ್ ನಡೆದದ್ದು ಬಿಟ್ಟರೆ, ಪಕ್ಷ ರಚನೆಯಾಗಲೇ ಇಲ್ಲ. ಬದಲಾಗಿ ಈ ಅವಧಿಯಲ್ಲಿ ರಜನಿ ಹೀರೋ ಆದ ನಾಲ್ಕು ಸಿನಿಮಾಗಳು ಬಿಡುಗಡೆಯಾಗಿ ಬಾಕ್ಸಾಫೀಸ್‌ನಲ್ಲಿ ದುಡ್ಡು ದೋಚಿದ್ದೇ ಬಂತು.

ಈಗ ಮುಖ್ಯಮಂತ್ರಿಯಾಗುವ ಆಲೋಚನೆ ಇಲ್ಲ ಎನ್ನುವ ರಜನಿ ಹೇಳಿಕೆ ಬಂದಿರುವುದೂ ಇತ್ತೀಚಿನ 'ದರ್ಬಾರ್' ಸಿನಿಮಾ ಫ್ಲಾಪ್ ಆದ ಮೇಲೆ ಎನ್ನುವುದು ಕುತೂಹಲಕರ. ಅಂದರೆ, ಸಿನಿಮಾ ಬಿಡುಗಡೆಗೆ ಮುನ್ನ ರಾಜಕೀಯದ ಗಾಳಿಸುದ್ದಿ ಎಬ್ಬಿಸಿದರೆ ಇನ್ನು ಮುಂದೆ ಪ್ರಯೋಜನ ಆಗುವುದಿಲ್ಲ ಎಂದು ರಜನಿಗೆ ಮನವರಿಕೆ ಆಗಿರಬಹುದೇ? ಹಾಗೆ ನೋಡಿದರೆ ರಜನಿಕಾಂತ್‌ಗಿಂತ ಇನ್ನೊಬ್ಬ ನಟ ಕಮಲಹಾಸನ್ ವಾಸಿ. ಲಾಭವೋ, ನಷ್ಟವೋ.. ರಾಜಕೀಯ ಪಕ್ಷ ಕಟ್ಟುತ್ತೇನೆ ಎನ್ನುವ ತಮ್ಮ ಹೇಳಿಕೆಯನ್ನು ಕೆಲವೇ ತಿಂಗಳಲ್ಲಿ ನಿಜವಾಗಿಸಿ ಕಳೆದ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಕಮಲ್ ಕಣಕ್ಕಿಳಿಸಿದ್ದರು. ಹೀನಾಯ ಸೋಲು ಎದುರಾದರೂ ಆ ಪಕ್ಷ ಈಗಲೂ ಜೀವಂತವಾಗಿದೆ.

ರಜನಿಕಾಂತ್ ಹೇಳಿದ್ದು ಗೋಡೆಯ ಮೇಲಿನ ಬರವಣಿಗೆಯಂತೆ ಸ್ಪಷ್ಟವಾಗಿದ್ದರೂ ಆತನ ಅಭಿಮಾನಿ ಸಂಘದ ಪದಾಧಿಕಾರಿಗಳು ಅದನ್ನು ನಂಬಲು ತಯಾರಿಲ್ಲ! 'ಅಣ್ಣೆ ರಾಜಕೀಯ ಪಕ್ಷ ಖಂಡಿತ ಕಟ್ಟುತ್ತಾರೆ. ಆದರೆ ಪ್ರಾಮಾಣಿಕ ವ್ಯಕ್ತಿಯೊಬ್ಬನನ್ನು ಮುಖ್ಯಮಂತ್ರಿ ಮಾಡುತ್ತಾರೆ. ಅವರು ಪಕ್ಷವನ್ನಷ್ಟೇ ಮುನ್ನಡೆಸುತ್ತಾರೆ' ಎನ್ನುವುದು ಅವರ ನಂಬಿಕೆ. ತಮ್ಮ ವಿಶಿಷ್ಟ ಮ್ಯಾನರಿಸಂ ಮತ್ತು 'ಭಕಾಭಕ್' ಸಿನಿಮಾ ಡೈಲಾಗ್‌ಗಳ ಮೂಲಕ ಲಕ್ಷಾಂತರ ತಮಿಳರನ್ನು ಕಳೆದ ಮೂರು ದಶಕಗಳಿಂದ ಸಮ್ಮೋಹಿನಿಯಲ್ಲಿ ಇಟ್ಟಿರುವ ರಜನಿಯ ಮೇಲೆ ಈಗಲೂ ಅಭಿಮಾನಿಗಳಿಗೆ ಕುರುಡು ನಂಬಿಕೆ ಇರುವುದು ಸುಳ್ಳೇನಲ್ಲ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65